**ಓ.ಎಸ್. ನಂ. 59/2023** **ಪಿ.ಡಬ್ಲ್ಯೂ- 2**

**ಸಾಕ್ಷಿಯನ್ನು ದಿನಾಂಕ 14.6.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀಮತಿ ಎನ್.ಎಸ್ ವಕೀಲರಿಂದಃ

ನಾನು 11 ವರ್ಷಗಳಿಂದ ಪತ್ರಬರಹಗಾರನಾಗಿ ಕೆಲಸ ಮಾಡುತ್ತಿದ್ದೇನೆ. ನನಗೆ ವಾದಿ ಮತ್ತು ಪ್ರತಿವಾದಿಯರು ನಿಪಿ1 ದಾಖಲೆಯನ್ನು ಬರೆಸಲು ಬಂದಾಗ ಪರಿಚಯವಾಗಿರುತ್ತಾರೆ. ದಿನಾಂಕ 16.11.2019 ರಂದು ಪ್ರತಿವಾದಿಯರು ವಾದಿಯಿಂದ 5 ಲಕ್ಷ ಹಣವನ್ನು ಸಾಲವಾಗಿ ಪಡೆದ ಭದ್ರತೆಗಾಗಿ ನಾನು ನಿಪಿ1 ದಾಖಲೆಯನ್ನು ಬರೆದಿರುತ್ತೇನೆ ಎಂದರೆ ಸರಿಯಲ್ಲ. ಸಾಲ ಪಡೆದುಕೊಂಡರೆ ಬೋಗ್ಯ ಅಥವಾ ಆಧಾರಪತ್ರ ಕಳೆದ 3-4 ವರ್ಷಗಳಿಂದ ನೋಂದಣಿಯಾಗುತ್ತಿಲ್ಲ. ಸಾಮಾನ್ಯವಾಗಿ ಬೋಗ್ಯ ಅಥವಾ ಆಧಾರಪತ್ರ ನೋಂದಣಿ ಮಾಡಲು ಸಾಧ್ಯವಾಗದಿರುವುದರಿಂದ ಹಣವನ್ನು ಸಾಲವಾಗಿ ನೀಡಿದ ಸಮಯದಲ್ಲಿ ಭದ್ರತೆಗಾಗಿ ಕರಾರುಪತ್ರವನ್ನು ಮಾಡಿಸುತ್ತೇವೆ ಎಂದರೆ ಸರಿಯಲ್ಲ. ನಾನು ದಾಖಲಾತಿಯನ್ನು ತಯಾರಿಸಿರುವ ಬಗ್ಗೆ ರಿಜಿಸ್ಟರನ್ನು ಇಟ್ಟುಕೊಂಡಿರುವುದಿಲ್ಲ. ನಾನು ಯಾವುದೇ ದಾಖಲಾತಿಯನ್ನು ತಯಾರಿಸಿ ನೋಂದಣಿ ಮಾಡಿಸಿದರೆ ನನ್ನ ರಿಜಿಸ್ಟರಿನಲ್ಲಿ ನಮೂದು ಮಾಡುವ ಬದ್ದತೆ ಹೊಂದಿರುತ್ತೇನೆ ಎಂದರೆ ಸಾಕ್ಷಿದಾರರು ಇನ್ನು ಮುಂದೆ ಮಾಡುತ್ತೇನೆ ಎನ್ನುವರು. ನಾನು ನಿಪಿ1 ತಯಾರಿಸುವ ಸಮಯದಲ್ಲಿ ಆಸ್ತಿಯ ಇ-ಸ್ವತ್ತು ದಾಖಲೆ ಹಾಗೂ ಪಕ್ಷಗಾರರ ಆಧಾರಕಾರ್ಡನ್ನು ನೋಡಿರುತ್ತೇನೆ. ಇ-ಸ್ವತ್ತು ದಾಖಲೆಯಲ್ಲಿ ಆಸ್ತಿಯು ಪಿತ್ರಾರ್ಜಿತವೋ ಅಲ್ಲವೋ ಎಂದು ಗೊತ್ತಾಗುವುದಿಲ್ಲ, ಮೂಲ ದಾಖಲೆಯನ್ನು ನೋಡಿದರೆ ಗೊತ್ತಾಗುತ್ತದೆ ಎಂದರೆ ಸರಿ. ನಿಪಿ1 ದಾಖಲೆಯನ್ನು ತಯಾರಿಸಿದಾಗ ನಾನು ಯಾವುದೇ ಮೂಲ ದಾಖಲೆಯನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ1 ರಲ್ಲಿ ಆಸ್ತಿಯು ಹೇಗೆ ಬಂದಿರುತ್ತದೆ ಎಂದು ಬರೆದಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಯರು ಸಾಲದ ಭದ್ರತೆಗಾಗಿ ದಾಖಲೆ ಮಾಡಿಕೊಳ್ಳಲು ಬಂದಿದ್ದು ಆ ಕಾರಣ ಅವರು ಆಸ್ತಿಯ ಇ-ಸ್ವತ್ತು ದಾಖಲೆಯನ್ನು ಮಾತ್ರ ತೋರಿಸಿದ್ದು ನಾನು ಪ್ರತಿವಾದಿಯರಿಗೆ ಮೋಸ ಮಾಡಿ ಕ್ರಯದ ಕರಾರುಪತ್ರವನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಆಸ್ತಿಯನ್ನು ಖರೀದಿ ಮಾಡಬೇಕಾದರೆ ಕ್ರಯದಾರರು ಮೂಲ ದಾಖಲೆಯನ್ನು ಪರಿಶೀಲಿಸಿ ಖರೀದಿ ಮಾಡಿಕೊಳ್ಳುತ್ತಾರೆ ಎಂದರೆ ಸರಿ. ನಿಪಿ1 ರಲ್ಲಿ ಸಹನ ಎಂ ಎನ್ನುವ ಸಹಿಯನ್ನು ನನ್ನ ಸಮಕ್ಷಮ ಹಾಕಿರುವುದಿಲ್ಲ ಹಾಗೂ ಅವರ ಹೆಸರನ್ನು ನಿಪಿ1 ರಲ್ಲಿ ಬರೆದಿರುವುದಿಲ್ಲ. ಸಾಮಾನ್ಯವಾಗಿ ದಾಖಲೆಯನ್ನು ತಯಾರಿಸಿ ಪಕ್ಷಗಾರರ ಸಹಿಯನ್ನು ಪಡೆದುಕೊಂಡು ನಾವೇ ನೋಂದಣಿ ಮಾಡಿಸಿಕೊಡುತ್ತೇವೆ ಎಂದರೆ ಸಾಕ್ಷಿದಾರರು ಪತ್ರ ತಯಾರಿಸಿ ಪಕ್ಷಗಾರರ ಸಹಿಯನ್ನು ಪಡೆದು ಕಛೇರಿಗೆ ಕಳುಹಿಸಿಕೊಡುತ್ತೇವೆ ಎನ್ನುವರು. ನಿಪಿ1 ದಾಖಲೆಯನ್ನು ತಯಾರಿಸಲು ವಾದಿ, ವಾದಿಯ ಗಂಡ, ಸೋಮು ಮತ್ತು ಸೋಮಣ್ಣ ಎಂಬುವವರು ಮಾಹಿತಿ ನೀಡಿರುತ್ತಾರೆ ಎಂದರೆ ಸಾಕ್ಷಿದಾರರು ವಾದಿ ಪ್ರತಿವಾದಿಯರು ಒಟ್ಟಿಗೆ ಮಾಹಿತಿ ನೀಡಿರುತ್ತಾರೆ ಎನ್ನುವರು.

ನಿಪಿ1 ದಾಖಲೆಗೆ ಸಹಿ ಮಾಡಿರುವ ಸೋಮಣ್ಣ ಎಂಬುವವರು ನೋಂದಣಿ ಕಛೇರಿಯಲ್ಲಿ ಇ.ಸಿ ಕೊಡುವ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಹಣವನ್ನು ಸಾಲವಾಗಿ ಪಡೆದುಕೊಂಡಿದ್ದರೂ ಸಹ ನಾನು, ವಾದಿ, ವಾದಿಯ ಗಂಡ, ಸೋಮು ಮತ್ತು ಸೋಮಣ್ಣ ರವರು ಸೇರಿ ಪ್ರತಿವಾದಿಯರಿಗೆ ಮೋಸ ಮಾಡಲು ನಿಪಿ1 ದಾಖಲೆಯನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನಿಪಿ1 ರಲ್ಲಿ ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿರುವುದು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಯರು ಸಾಲದ ಭದ್ರತೆಗಾಗಿ ದಾಖಲಾತಿಯನ್ನು ಬರೆದುಕೊಡಲು ಬಂದಿದ್ದು, ನಾನು ಆಧಾರಪತ್ರ ನೋಂದಣಿಯಾಗುವುದಿಲ್ಲ ಎಂದು ಮಾಹಿತಿ ನೀಡದೇ ಅವರಿಗೆ ಮೋಸ ಮಾಡಲು ಕ್ರಯದ ಕರಾರುಪತ್ರವನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.